ಗಳಿಸಿರುವನು. ಆದರೆ ತನ್ನ ಮನೆಯಲ್ಲಿ ಕೆಲಸ ಮಾಡುವ ಆಳುಗಳನ್ನು ಕೀಳಾಗಿ ನೋಡಿಕೊಳ್ಳುವನು. ಅವರಿಗೆ ಕಡಿಮೆ ಸಂಬಳ, ಹಳಸಿದ ಆಹಾರ, ಹರಿದ ಬಟ್ಟೆಗಳನ್ನು ನೀಡುವನು. ಇದರಿಂದ ಆತನ ಕೆಲಸದಾಳುಗಳು ಆವನ ಬಗ್ಗೆ ಅಸಮಧಾನ ಹೊಂದಿರುವರು.

**a. i) ರಾಜೇಶನ ಈ ವರ್ತನೆಯ ಬಗ್ಗೆ ನಿನ್ನ ಅನಿಸಿಕೆಗಳೇನು? ಈ ವರ್ತನೆ ಸರಿಯೇ, ತಪ್ಪೇ? ಏಕೆ?**

**ii) ರಾಜೇಶನ ಕೆಲಸದಾಳುಗಳು ಯಾವ ಹಕ್ಕಿನಿಂದ ವಂಚಿತರಾಗಿರುವರು?**

**b. i) ರಾಜೇಶನ ಧಾನಧರ್ಮಗಳ ಬಗ್ಗೆ ನಿನ್ನ ಅಭಿಪ್ರಾಯವೇನು?**

**ii) ರಾಜೇಶನ ಧಾನ ಧರ್ಮಗಳಿಂದ ಪ್ರಯೋಜನ ವಿದೆಯೆ? ಏಕೆ?**

**c. ರಾಜೇಶನಿಗೆ ನಿನ್ನ ಸಲಹೆಗಳೇನು?**

2. ರಮೇಶ, ಸುರೇಶ ಮತ್ತು ಹರೀಶ ಅನ್ಯೋನ್ಯ ಗೆಳೆಯರು. ಓದಿನಲ್ಲಿ ಆಸಕ್ತಿ ಕಡಿಮೆ. ತರಗತಿಗಳು ಮುಗಿದ ಕೂಡಲೇ ಮನೆಗೆ ತೆರಳದೆ ಅಲ್ಲಲ್ಲಿ ನಿಂತು ನಾಯಿಗಳಿಗೆ ಕಲ್ಲು ಹೊಡೆಯುವುದು, ವಿದ್ಯಾರ್ಥಿನಿಯನ್ನು, ವಯಸ್ಸದವರನ್ನು, ಅಸಹಾಯಕರನ್ನು ಕಂಡು ಹಾಸ್ಯ ಮಾಡುವುದು ಅವರ ಪ್ರವೃತ್ತಿ. ಇದರಿಂದಾಗಿ ನಾಯಿಗಳು ಇವರನ್ನು ಕಂಡು ಪ್ರಾಣಭಯದಿಂದ ಓಡಿ ಹೋಗುತ್ತವೆ. ವಿದ್ಯಾರ್ಥಿನಿಯರು ಬೇಸರ ಪಡುತ್ತಾರೆ.

**a. i) ಈ ಮೂವರು ಗೆಳೆಯರು ಈ ರೀತಿ ವರ್ತಿಸಲು ಕಾರಣವೇನು?**

**ii) ಈ ಪರಿಸ್ಥಿತಿಯಲ್ಲಿ ನೀನೇನು ಮಾಡಬಲ್ಲೆ?**

**b. i) ಪ್ರಾಣಿಗಳನ್ನು ಮತ್ತು ಅಶಕ್ತರನ್ನು ನಾವು ಹೇಗೆ ನೋಡಿಕೊಳ್ಳಬೇಕು?**

**ii) ಪರ ಸಂವೇದನಾ ಶೀಲತೆಯ ಅವಶ್ಯಕತೆಯೇನು?**

**c. ಇತರರ ಕಷ್ಟಗಳಿಗೆ ನಾವೇಕೆ ಸ್ಪಂದಿಸಬೇಕು?**

3. ಆರತಿ ಶಾಲಾ ನಾಯಕಿಯಾಗಿ ಚುನಾಯಿತಳಾಗಿರುವಳು. ಅವಳು ಅಧಿಕಾರ ಮತ್ತು ಹುದ್ದೆಯ ಆಸೆಯಿಂದ ಚುನಾವಣೆಯಲ್ಲಿ ಸ್ಪರ್ಧಿಸಿದ್ದಳು. ಆದರೆ ಜವಾಬ್ದಾರಿಗಳನ್ನು ವಹಿಸಿಕೊಳ್ಳಲು ಹಿಂಜರಿಯುವಳು. ಕೆಲವರೊಡನೆ ಮಾತ್ರ ಸ್ನೇಹದಿಂದ ಇರುವಳು. ಆಕೆ ತನ್ನ ಆತ್ಮೀಯ ಗೆಳತಿಯರ ದೂರುಗಳನ್ನು, ತಪ್ಪುಗಳನ್ನು ಉಪಾಧ್ಯಾಯರಿಗೆ ತಿಳಿಸುವುದಿಲ್ಲ. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಯೋಜಿಸುವಲ್ಲಿ ಆಕೆಗೆ ಆಸಕ್ತಿಯಿಲ್ಲ.

**a. i) ಶಾಲಾ ನಾಯಕಿಯಾಗಿ ಆರತಿಯ ಜವಾಬ್ದಾರಿಗಳೇನು?**

**ii) ಅವುಗಳನ್ನು ಆಕೆ ಹೇಗೆ ನಿಭಾಯಿಸಬೇಕು?**

**b. i) ಒಬ್ಬ ಮುಖಂಡನಲ್ಲಿ ಇರಬೇಕಾದ ಯಾವುದಾದಾರು ಎರಡು ಮುಖ್ಯ ಗುಣಗಳು ಯಾವುವು?**

**ii) ಆತನು ತನ್ನ ತಂಡವನ್ನು ಹೇಗೆ ನಡೆಸಿಕೊಳ್ಳಬೇಕು?**

**c. ನೀನು ಶಾಲಾ ನಾಯಕನಾದರೆ ನಿನ್ನ ಕರ್ತವ್ಯಗಳನ್ನು ಹೇಗೆ ನಿಭಾಯಿಸಬಲ್ಲೆ?**



# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 05–01–2019** **ಸಮಯ : $2^1/_2$ ಘಂಟೆ**

**ತರಗತಿ : X** **ಅಂಕ : 80**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

**I. ಆವರಣದಿಂದ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ:** **10x1=10**

1. ಮಾನವನು ________ ದ ಅವಿಭಾಜ್ಯ ಅಂಗ.
(ಸಮಾಜ; ಪ್ರದೇಶ; ಸಂಘ)
2. ________ ಸಂತೋಷ ಮತ್ತು ಆರೋಗ್ಯಕರ ಜೀವನದ ಕೀಲಿಯಾಗಿದೆ.
(ಸಂಪತ್ತು; ಸಂವೇಧನಾಶೀಲತೆ; ವಿದ್ಯೆ)
3. ________ ಹಕ್ಕುಗಳು ವ್ಯಕ್ತಿಗಳನ್ನು ಸಮಾನರೆಂದು ಗುರುತಿಸುತ್ತದೆ.
(ಆರ್ಥಿಕ; ಸಾಮಾಜಿಕ; ಧಾರ್ಮಿಕ)
4. ಗೆಳತನಕ್ಕೆ ________ ಯು ಶೋಭೆಯನ್ನು ತರುತ್ತದೆ.
(ಜವಾಬ್ದಾರಿ; ನಿಷ್ಠೆ; ಬಾವನೆ)
5. "ಇತರರ ಅಭಿಪ್ರಾಯವನ್ನು ಕೇಳುವುದು" ಇದು ________ ಯ ಲಕ್ಷಣ.
(ಅಹಂಕಾರ; ಪರಾವಲಂಬನೆ; ದೀನತೆ)
6. ________ ಗಳು ನಮ್ಮ ಬಾಳನ್ನು ಪುನಃ ಕೇಂದ್ರಿಕರಿಸಲು ಸಹಾಯಕವಾಗುತ್ತದೆ.
(ಸಮಾರಂಭ; ಸಹಕಾರ; ಕಷ್ಟ)
7. ವೈವಿಧ್ಯತೆಯು ಜೀವನಕ್ಕೆ ________ ವನ್ನು ತರುತ್ತದೆ.
(ಬೇಸರ; ಹೊಸತನ; ಗೌರವ)
8. ಮಾನವ ಘನತೆಯನ್ನು ________ ನಾಶ ಮಾಡುತ್ತದೆ.
(ಲಿಂಗಭೇದಗಳು; ಪರಿಸರ; ಅಭಿಲಾಷೆಗಳು)
9. ಮದರ್ ತೆರೇಜಾರವರು "ಜೀವಂತ ಸಂತರೆಂದು ಪ್ರಸಿದ್ದರಾಗಲು ಕಾರಣ.
(ಅನಾಥರ ಮತ್ತು ಬಾಲಾಪರಾಧಿಗಳ ಸೇವೆ; ಸಮಾನತೆಗಾಗಿ ಹೋರಾಟ; ಸ್ತ್ರೀಯರ ಹಕ್ಕುಗಳಿಗಾಗಿ ಹೋರಾಟ)
10. ನಾವು ________ ಕಡೆಗಣಿಸಿದಾಗ ಕಷ್ಟಗಳನ್ನು ಆಹ್ವಾನಿಸುತ್ತೇವೆ.
(ದೇವರನ್ನು; ನೆರೆಹೊರೆಯವರನ್ನು; ಗೆಳೆಯರನ್ನು)

**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿಸಿರಿ: 5x1=5**

1. ___________ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ.
2. ಪ್ರೀತಿಸುವುದು ಮತ್ತು ಹಂಚಿಕೊಳ್ಳುವುದು ಇವೆರಡು _____ ದ ಎರಡು ಕಂಬಗಳು.
3. ________ ನಮಗೆ ಒಂದು ಅವಕಾಶ, ಜವಾಬ್ದಾರಿ ಮತ್ತು ಕರ್ತವ್ಯವನ್ನು ನೀಡುತ್ತದೆ.
4. ಕೆಲಸಕ್ಕೆ ಸಮಯವಿರಲಿ, ___________ ನ ಬೆಲೆ ಅದು.
5. ಅತೀ ಕನಿಷ್ಟ ಮತ್ತು ಮುಖ್ಯವಾದ ಪದ __________

**III. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೇ ಪದಕ್ಕೆ ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ: 5x1=5**

1. ಗುರಿ ಸಾಧನೆ : **ಮುಖಂಡತ್ವ** :: ನಂಬಿಗಸ್ಥ ಮನೋಭಾವ : ________
2. ದೈಹಿಕ ರಚನೆ : **ಜೈವಿಕ ಜನನ** :: ವ್ಯಕ್ತಿತ್ವ : ________
3. ಠೀಕಿಸುವ ಮೊದಲು : **ನಾಲಿಗೆಯನ್ನು ತಡೆಹಿಡಿ** :: ಮಾತನಾಡುವ ಮೊದಲು : ______
4. ಕ್ಷಣದ ಬೆಲೆ : **ಒಲಿಂಪಿಕ್ ಸ್ಪರ್ಧೆಯಲ್ಲಿ ಬೆಳ್ಳಿಯ ಪದಕ ಪಡೆದ ಸ್ಪರ್ಧಿ** :: ನಿಮಿಷದ ಬೆಲೆ : _______
5. ಏಕಾಗ್ರತೆಯಿಂದ ಆಲಿಸು : **ಸಂವೇಧನೆ** :: ಪರಿಸರದ ಬಗ್ಗೆ ಪ್ರಜ್ಞೆ : _________

**IV. ಹೊಂದಿಸಿ ಬರೆಯಿರಿ: 5x1=5**

| | | |
|---|---|---|
| 1. ನಂಬಿಕೆ | – | ಸಮಯದ ಬಳಕೆ |
| 2. ಯೋಜನೆ | – | ಗೆಳೆತನ |
| 3. ಸಾರ್ವಜನಿಕ ಆಸ್ತಿಯ ರಕ್ಷಣೆ | – | ಮಾನವ ಲಕ್ಷಣ |
| 4. ದೀನತೆ | – | ನ್ಯಾಯ ಬದ್ಧ ನಿರ್ಧಾರಗಳು |
| 5. ಮುಖಂಡತ್ವ | – | ಸಮಾಜ ಸಂವೇದನಾಶೀಲತೆ |

**V. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ: 5x1=5**

1. ಪ್ರಪಂಚವು ಅನೇಕ ರಾಷ್ಟ್ರಗಳಾಗಿ ವಿಭಜನೆ ಹೊಂದಲು ಕಾರಣವೇನು?
2. ಸಾಮಾಜಿಕ ಜೀವನದಲ್ಲಿ ಯಾವ ಅಂಶಗಳ ಬಗ್ಗೆ ಪರಿಜ್ಞಾನ ಅತ್ಯಗತ್ಯ?
3. ದೀನತೆಯ ಕೊರತೆಯಿಂದ ಉಂಟಾಗುವ ಪರಿಣಾಮಗಳೇನು?
4. ಮಾನವ ಹಕ್ಕುಗಳ ಘೋಷಣೆಯ ತಿರುಳೇನು?
5. ಪೇರಿತ ಜನನ ಎಂದರೇನು?



**VI. ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. ನಮ್ಮ ಸಮಾಜದ ಆರ್ಥಿಕ ವ್ಯವಸ್ಥೆಯಲ್ಲಿ ಅಡಕವಾಗಿರುವ ಅಂಶಗಳು ಯಾವುವು?
2. ಸಂವೇದನಾ ಶೀಲತೆಯ ಮೂರು ಹಂತಗಳನ್ನು ಹೆಸರಿಸಿರಿ.
3. ಸಮಯದ ಗುಣಗಳು ಯಾವುವು?
4. ನಿಜ ಗೆಳೆತನದಿಂದ ಆಗುವ ಪ್ರಯೋಜನಗಳು ಯಾವುವು?
5. ಪರಿಣಾಮಕಾರಿ ಮುಖಂಡನಾಗಲು ಅವನು ಮಾಡಬೇಕಾದ ಕೆಲಸಗಳು ಯಾವುವು?
6. ಸಾರ್ವತ್ರಿಕತೆಯ ಸೂತ್ರವು ಶಾಂತಿ, ಪ್ರಗತಿ ಮತ್ತು ಸಮೃದ್ಧಿಯ ಮಂತ್ರವಾಗಿದೆ. ಹೇಗೆ?
7. ಮಾನವ ಜೀವಿಗಳು ಘನತೆಯಿಂದ ಜಿವಿಸಲು ಮಾನವ ಹಕ್ಕುಗಳು ಹೇಗೆ ಸಹಕಾರಿಯಾಗಿವೆ?

**VII. ಯಾವುದಾದರೂ ಆರು ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ: 6x3=18**

1. ಸಾಮಾಜಿಕ ಪರಿಜ್ಞಾನದ ಅವಶ್ಯಕತೆಯೇನು?
2. ಸಂವೇದನಾ ಶೀಲತೆಯನ್ನು ನಾವು ಹೇಗೆ ಬೆಳೆಸಿಕೊಳ್ಳಬಹುದು?
3. ಸಮಯದ ಉಪಯುಕ್ತ ಬಳಕೆಗೆ ತೊಡಕಾಗುವ ಅಂಶಗಳು ಯಾವುವು?
4. ಒಬ್ಬ ಒಳ್ಳೆಯ ಗೆಳೆಯನ ಲಕ್ಷಣಗಳು ಯಾವುವು?
5. ಈ ಪ್ರಪಂಚದಲ್ಲಿ ಬಾಳಲು ನಿನಗೆ ಅವಕಾಶ ಮಾಡಿಕೊಟ್ಟ ಅದ್ಭುತಕರ ಅವಕಾಶಕ್ಕಾಗಿ ನೀನು ನಿನ್ನ ಪೋಷಕರಿಗೆ ಹೇಗೆ ಕೃತಜ್ಞತೆಯನ್ನು ಸಲ್ಲಿಸಬಹುದು?
6. ಒಬ್ಬ ಮುಖಂಡನು ತನ್ನ ಯೋಜನೆಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಬೇಕಾದರೆ ಅವನಲ್ಲಿರಬೇಕಾದ ಗುಣಗಳು ಯಾವುವು?
7. ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯಲ್ಲಿ ಅಡಕವಾಗಿರುವ ಯಾವುದಾದರೂ ಆರು ಅಂಶಗಳನ್ನು ಬರೆಯಿರಿ.

**VIII. ಯಾವುದಾದರೂ ಎರಡು ವಿಷಯಗಳ ಬಗ್ಗೆ ವಿವರಿಸಿ ಬರೆಯಿರಿ: 2x5=10**

1. ಗೆಳೆತನ–ಪರಕೇಂದ್ರಿತ
2. ಸಮಯ ಮತ್ತು ಸಮುದ್ರದ ಅಲೆಗಳು ಯಾರನ್ನು ಕಾಯುವುದಿಲ್ಲ.
3. ಐಕ್ಯತೆ–ಇಂದಿನ ಸಮಾಜದ ಅವಶ್ಯಕತೆ.

**IX. ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳಿಗೆ ಪರಿಹಾರ ನೀಡಿರಿ: 2x6=12**

1. ರಾಜೇಶ ಒಬ್ಬ ಧನಿಕ. ಅಪಾರವಾದ ಆಸ್ತಿಪಾಸ್ತಿಗಳನ್ನು ಹೊಂದಿರುವನು. ತನ್ನ ಪರಿಸರದ ಸಂಘ ಸಂಸ್ಥೆಗಳಿಗೆ ಯಥೇಚ್ಚವಾಗಿ ಧನ ಸಹಾಯವನ್ನು ಮಾಡಿ ಹೆಸರು